# ಸ್ಫೂರ್ತಿಯ ಚಿಲುಮೆ

ಪ್ರವೀಣ ಕುಲಕರ್ಣಿ

ಈ ವ್ಯಕ್ತಿಗೆ ಕೈಗಳಿಲ್ಲ, ಕಾಲುಗಳೂ ಇಲ್ಲ. ಆದರೆ, ಅವರಿಗೆ ಇದು ಯಾವುದೂ ಮಿತಿಯೇ ಅಲ್ಲ. ಅವರು ನದಿ ದಂಡೆಯ ಮೇಲೆ ನಿಂತು ಮೀನಿಗೆ ಗಾಳ ಹಾಕಬಲ್ಲರು, ಮನೆಯಲ್ಲಿ ಕುಳಿತು ಚಿತ್ರಗಳಿಗೆ ಬಣ್ಣ ತುಂಬಬಲ್ಲರು, ನಟನೆಯಲ್ಲಿ ಸಿದ್ಧಹಸ್ತರು, ಸಮುದ್ರದ ಆಳಕ್ಕೆ ಇಳಿದು ಸರ್ಫಿಂಗ್‌ನಲ್ಲಿ ತೊಡಗಬಲ್ಲರು, ನೀರಿಗಿಳಿದು ಈಜುವುದರಲ್ಲಿ ನಿಪುಣರು, ಸ್ಕೈ ಡೈವ್ ಸಾಹಸಕ್ಕೆ ಧುಮುಕಬಲ್ಲರು, ಬೆಸ್ಟ್ ಸೆಲ್ಲರ್ ಪುಸ್ತಕಗಳನ್ನು ಕೂಡ ಬರೆಯಬಲ್ಲರು, ಅಷ್ಟೇ ಅಲ್ಲ; ಲಕ್ಷ ಲಕ್ಷ ಮಂದಿಯ ಮುಂದೆ ನಿಂತು ಪ್ರೇರಣೆದಾಯಕ ಭಾಷಣವನ್ನೂ ಅವರು ಮಾಡಬಲ್ಲರು!

ಹೌದು, ನಿಕ್ ವೋಯಿಚಿಚ್ ಇದ್ದಾರೆಂದರೆ ಅಲ್ಲಿ ಮಿಂಚಿನ ವಿದ್ಯುತ್ ಸಂಚಾರ ಆಗುತ್ತಿದೆ ಎಂತಲೇ ಅರ್ಥ. ನಿಕ್ ನುಡಿದರೆ ಅದು ಅಕ್ಷರಶಃ ಮುತ್ತಿನ ಹಾರ, ಮಾಣಿಕ್ಯದ ದೀಪ್ತಿ, ಸ್ಫಟಿಕದ ಸಲಾಕೆ. ಜೀವನದಲ್ಲಿ ಸೋತು ಸುಣ್ಣವಾದವರಿರಲಿ, ಖಿನ್ನತೆಯಿಂದ ಬಳಲುತ್ತಿರುವವರಿರಲಿ, ಸ್ಪಷ್ಟ ದಾರಿಯೊಂದು ಕಾಣದೆ ಗೊಂದಲದ ವರ್ತುಲದಲ್ಲಿ ಸಿಕ್ಕವರಿರಲಿ, ಅವರ ಹೃದಯದಲ್ಲೊಂದು ಭರವಸೆಯ ಹಣತೆಯನ್ನು ಥಟ್ಟಂತ ಬೆಳಗಿಬಿಡುತ್ತಾರೆ. 'ಹಣತೆ ಹಚ್ಚುತ್ತೇನೆ ನಾನೂ/ ಈ ಕತ್ತಲನ್ನು ಗೆದ್ದು ನಿಲ್ಲುತ್ತೇನೆಂಬ ಜಿದ್ದಿನಿಂದ, ಅಂಧಕಾರವನ್ನು ದಾಟಿಯೇ ತೀರುತ್ತೇನೆಂಬ ಧೈರ್ಯದಿಂದ' (ಜಿ.ಎಸ್. ಶಿವರುದ್ರಪ್ಪ) ಎನ್ನುವ ಆತ್ಮವಿಶ್ವಾಸವನ್ನೂ ಅವರು ಪ್ರದರ್ಶಿಸುತ್ತಾರೆ. ಅವರ ಮಾತನ್ನು ಕೇಳುತ್ತಾ ನಿಂತವರಿಗೆ ಕೊನೆಗೆ ಅವರೇ ಒಂದು ದೀಪವಾಗಿ ಕಾಣುತ್ತಾರೆ.

ಆಸ್ಟ್ರೇಲಿಯಾದಲ್ಲಿ ಜನಿಸಿ, ಸದ್ಯ ಅಮೆರಿಕದಲ್ಲಿ ನೆಲೆ ನಿಂತಿರುವ ನಿಕ್ ಅವರೊಬ್ಬ ಅಸಾಮಾನ್ಯ ಸ್ಫೂರ್ತಿಯ ಚಿಲುಮೆ. ಹಾಗೆ ನೋಡಿದರೆ ಅವರಿಗೆ ನಿತ್ಯದ ಬದುಕಿನ ಹಲವು ಕೆಲಸಗಳನ್ನು (ಉದಾಹರಣೆಗೆ ಹಲ್ಲು ಉಜ್ಜುವುದು) ಸ್ವತಃ ಮಾಡಿಕೊಳ್ಳುವುದು ಕಷ್ಟ. ಆದರೆ, ಜಗತ್ತಿನ ನೊಂದ ಜೀವಿಗಳ ಕಣ್ಣೀರು ಒರೆಸುವುದರಲ್ಲಿ, ಬಳಲಿ ಬೆಂಡಾದ ಜೀವಗಳಲ್ಲೊಂದು ಸ್ಫೂರ್ತಿಯ ಸೆಲೆ ಉಕ್ಕಿಸುವುದರಲ್ಲಿ ಅವರು ಸದಾ ಮುಂದು. ಇದುವರೆಗೆ 78 ದೇಶಗಳಲ್ಲಿ, 3,500 ವೇದಿಕೆಗಳಲ್ಲಿ ಅವರು ಪ್ರೇರಣೆದಾಯಕ ಭಾಷಣ ಮಾಡಿದ್ದಾರೆ. ಎಂಟು ಲಕ್ಷದಷ್ಟು ದೊಡ್ಡ ಸಭಿಕವರ್ಗದ ಮುಂದೆಯೂ ಅವರು ಮಾತನಾಡಿದ್ದಾರೆ. ಜಗತ್ತಿನ 25 ದೇಶಗಳ ಅಧ್ಯಕ್ಷರು/ಪ್ರಧಾನಿಗಳ ಜತೆ ಸಂವಾದ ನಡೆಸಿದ್ದಾರೆ. 'ಜನರೇಷನ್ ಜೆಡ್' (ನವಪೀಳಿಗೆ) ಮೇಲೆ ಅವರಿಗೆ ವಿಶೇಷ ಕಾಳಜಿ. ಅವರಲ್ಲಿ ಮೌಲ್ಯಗಳನ್ನು ಬಿತ್ತುವ ಕೆಲಸವನ್ನೂ ಈ ನಮ್ಮ ನಿಕ್ ಮಾಡುತ್ತಿದ್ದಾರೆ. ಕಾರ್ಪೊರೇಟ್‌ಗಳು, ಶಾಲಾ–ಕಾಲೇಜುಗಳ ಆವರಣದಲ್ಲಿ ಅವರೊಬ್ಬ ಸ್ಫೂರ್ತಿ ತುಂಬುವ ಮಾತುಗಾರರಾದರೆ, ಕ್ರೈಸ್ತ ಮಿಷನರಿಗಳ ಪಾಲಿಗೆ ಒಬ್ಬ ಅನನ್ಯ ಧರ್ಮಬೋಧಕರು.



ನಿಕ್ ಅವರ ದೈಹಿಕ ಸ್ಥಿತಿಗೆ ವೈದ್ಯಕೀಯ ಲೋಕದ ಬಳಿ ನಿಖರ ಉತ್ತರವಿಲ್ಲ. ಟೆಟ್ರಾ ಅಮೆಲಿಯಾ ಸಿಂಡ್ರೋಮ್ ಕಾರಣದಿಂದ ಅತ್ಯಂತ ವಿರಳವಾಗಿ ಇಂತಹ ದೈಹಿಕ ಸ್ಥಿತಿಯ ಶಿಶುಗಳು ಜನಿಸುವುದುಂಟು ಎಂಬುದಷ್ಟೇ ತಜ್ಞರ ವಿವರಣೆ. ನಿಕ್ ಅವರ ದೇಹ ಇರುವುದು ಪೃಷ್ಠದವರೆಗೆ ಮಾತ್ರ. ಎಡ ಪೃಷ್ಠಕ್ಕೆ ಪುಟ್ಟ ಪಾದವೊಂದು ಅಂಟಿಕೊಂಡಿದೆ. ಇಡೀ ದೇಹವನ್ನು ಎದ್ದು ನಿಲ್ಲಿಸುವಲ್ಲಿ, ಬೀಳದಂತೆ ಸಮತೋಲನ ಕಾಯ್ದುಕೊಳ್ಳುವಲ್ಲಿ ಈ ಪಾದ ಅವರ ನೆರವಿಗೆ ಬಂದಿದೆ. ಪಾದದ ಬೆರಳುಗಳ ಸಹಾಯದಿಂದ ಅವರು ನಮ್ಮ–ನಿಮ್ಮಂತೆಯೇ ಅಕ್ಷರ ಟೈಪ್ ಮಾಡಬಲ್ಲರು. ಮಕ್ಕಳೊಂದಿಗೆ ಆಟವಾಡುತ್ತಾ ನಿಂತರೆ ಚೆಂಡನ್ನೂ ಒದೆಯಬಲ್ಲರು. ಆತ್ಮವಿಶ್ವಾಸ ಎಂಬುದು ಅವರಿಗೆ ಸಹಜವಾಗಿ ಬಂದಿದ್ದಲ್ಲ. ಶತಪ್ರಯತ್ನದಿಂದ ದಕ್ಕಿಸಿಕೊಂಡಿದ್ದು. ಆಸ್ಟ್ರೇಲಿಯಾದ ಮೆಲ್ಬರ್ನ್‌ನಲ್ಲಿ ಶಾಲೆಗೆ ಹೋಗುವಾಗ ಸಹಪಾಠಿಗಳಿಂದ ತೀವ್ರವಾಗಿ ಗೇಲಿಗೊಳಗಾಗಿ ಖಿನ್ನತೆಗೆ ಜಾರಿದ್ದರು. ಈ ಬದುಕಿನಲ್ಲಿ ಏನಿದೆ ಎಂಬ ಯೋಚನೆಯಲ್ಲಿ ಆತ್ಮಹತ್ಯೆಗೂ ಯತ್ನಿಸಿದ್ದರು. ಆದರೆ, ನಿಕ್ ಅವರ ಪಾಲಕರು ಅವರಲ್ಲಿ ಭರವಸೆ ತುಂಬಿದರು. ಹದಿನೇಳರ ಹರೆಯದಲ್ಲಿದ್ದಾಗ ಅವರ ಗುರುವೊಬ್ಬರು ಭಾಷಣ ಮಾಡುವಂತೆ ಹುರಿದುಂಬಿಸಿದರು. ಹಾಗೆ ಶುರುವಾದ ಅವರ ಮಾತಿನ ಯಾತ್ರೆ ಎಲ್ಲ ಎಲ್ಲೆಗಳನ್ನೂ ಮೀರಿ ಮುನ್ನಡೆಯುತ್ತಲೇ ಇದೆ.

ಕ್ಯಾಲಿಫೋರ್ನಿಯಾದ ನಿವಾಸಿಯಾಗಿರುವ ನಿಕ್ ಅವರ ಈ ದೈಹಿಕ ಸ್ಥಿತಿಯ ನಡುವೆಯೂ ಅವರನ್ನು ಪ್ರೀತಿಸಿ ವರಿಸಿದವರು ಕ್ಯಾನಿ. ಈ ದಂಪತಿಗೆ ಅವಳಿ ಸೇರಿದಂತೆ ನಾಲ್ವರು ಮಕ್ಕಳು. ಕೌಟುಂಬಿಕವಾಗಿಯೂ ಈ ಸಾಧಕನದು ಸಂತೃಪ್ತ ಭಾವ. ಸುಮ್ಮನೇ ಕಲ್ಪಿಸಿಕೊಳ್ಳೋಣ. ನಮ್ಮ–ನಿಮ್ಮಲ್ಲಿ ಯಾರಿಗಾದರೂ ಕೈ–ಕಾಲುಗಳಿಲ್ಲ, ನಡೆಯಲು ಸಾಧ್ಯವಾಗುತ್ತಿಲ್ಲ, ದೈನಂದಿನ ಕೆಲಸಗಳನ್ನು ಮಾಡಲಾಗುತ್ತಿಲ್ಲ, ಪ್ರೀತಿಪಾತ್ರರಾದವರನ್ನು ಅಪ್ಪಿಕೊಳ್ಳಲೂ ಆಗುತ್ತಿಲ್ಲ ಎಂದು. ಕಲ್ಪಿಸಿಕೊಳ್ಳಲೂ ಭಯವಲ್ಲವೇ? ಅಂತಹ ಸ್ಥಿತಿಯನ್ನು ಮೆಟ್ಟಿ ನಿಂತ ನಿಕ್ ಇದೇ ಕಾರಣಕ್ಕೆ ಅಸಾಮಾನ್ಯರಾಗಿ ಕಾಣುವುದು. 'ಅಡೆತಡೆಗಳನ್ನೇ ಅವಕಾಶಗಳನ್ನಾಗಿ ಪರಿವರ್ತಿಸಿಕೊಂಡೆ. ವೈಫಲ್ಯವೇ ನನ್ನ ಪಾಠಶಾಲೆಯಾಯಿತು' ಎಂದೆನ್ನುವ ನಿಕ್, ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರಿಗೂ ಜೀವನೋತ್ಸಾಹವನ್ನು ಮೊಗೆಮೊಗೆದು ಕೊಡುತ್ತಾರೆ. 'ನೀವು ಹೆದರುತ್ತಾ ಕುಳಿತರೆ ಧೈರ್ಯವು ನಿಮ್ಮನ್ನು ದಾಟಿಕೊಂಡು ಮುಂದಕ್ಕೆ ಹೋಗಿರುತ್ತದೆ', 'ನಾನೊಂದು ವೇಳೆ ವಿಫಲನಾದರೆ ಮತ್ತೆ ಮತ್ತೆ ಮತ್ತೆ ಮತ್ತೆ ಪ್ರಯತ್ನಪಡುತ್ತಲೇ ಇರುತ್ತೇನೆ', 'ದೇವರ ಯೋಜನೆ ಏನೆಂದು ನನಗೆ ಗೊತ್ತಿಲ್ಲದ ಮಾತ್ರಕ್ಕೆ ಆತ ನನ್ನೊಂದಿಗೆ ಇಲ್ಲ ಎಂದರ್ಥವಲ್ಲ', 'ಹೋರಾಟದ ತೀವ್ರತೆ ಹೆಚ್ಚಿದಷ್ಟೂ ಗೆಲುವಿನ ವೈಭವ ಹೆಚ್ಚಾಗುತ್ತದೆ' – ಇಂತಹ ಅವರ ಮಾತುಗಳಿಗೆ ಮರುಳಾಗದಿರುವವರೇ ಇಲ್ಲ.

ಕೈ–ಕಾಲುಗಳಿಲ್ಲದ ನನ್ನಿಂದ ಇಷ್ಟೊಂದು ಕೆಲಸ ಸಾಧ್ಯವಾಗುವುದಾದರೆ ನಿಮಗೇನಾಗಿದೆ? ನಿಜಕ್ಕೂ ನೀವೇ ಅಂಗವಿಕಲರು ಎಂದು ಸೋಮಾರಿಗಳನ್ನು ನಿಕ್ ಕುಟುಕುತ್ತಾರೆ. ಮನಸ್ಸನ್ನು ಅರಳಿಸಿ, ಹೃದಯವನ್ನು ಬೆಚ್ಚಗೆ ಮಾಡಿ, ಎತ್ತರೆತ್ತರಕ್ಕೆ ಬೆಳೆಯುವಂತೆ ಹುರಿದುಂಬಿಸುವ ಅವರ ಬದುಕಿನಿಂದ, ಅವರ ಮಾತಿನಿಂದ, ಅವರ ವ್ಯಕ್ತಿತ್ವದಿಂದ ಕಲಿಯುವುದು ಬೆಟ್ಟದಷ್ಟಿದೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65